

सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
February Vol. : 12 Issue : 9 5127/ ವಿಶ್ವಾವಸು ಸಂವತ್ಸರ ಫೆಬ್ರವರಿ 2026 ಪುಟ 8 Rs. 10/-

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಶ್ರೀರಾಮ ಮಂದಿರದಲ್ಲಿ ಸರಸ್ವತಿ ಪೂಜೆ

**23.01.2026**

ಶ್ರೀರಾಮ ಮಂದಿರ ಕಲ್ಲಡ್ಕದ ರಾಮಾಂಗಣದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ಸರಸ್ವತಿ ಪೂಜೆಯು ನಡೆಯಿತು. ಚಿತ್ರಾಪುರ ಮಠದ ಶ್ರೀ ಶ್ರೀ ವಿದ್ಯೆಂದ್ರತೀರ್ಥ ಶ್ರೀಪಾದರವರು ವಿದ್ಯಾರ್ಥಿಗಳಿಗೆ ಧರ್ಮದ ನಿಜವಾದ ವಿಚಾರಗಳನ್ನು ತಿಳಿದು ಅನುಷ್ಠಾನಗೊಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಆಶೀರ್ವಚನ ಮಾಡಿದರು. ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ ಸರಸ್ವತಿ ಮಂಟಪದಲ್ಲಿ ಸರಸ್ವತಿಗೆ ಪೂಜೆ ಮಾಡಿದರು. ನಂತರ ಶಾಲಾ ಪರಿಸರವನ್ನು ವೀಕ್ಷಣೆ ಮಾಡಿ ಹರ್ಷವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಸಂಸ್ಥಾಪಕರು, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ವಿದ್ಯಾಕೇಂದ್ರದ ಅಧ್ಯಕ್ಷರಾಗಿರುವ ಶ್ರೀ ನಾರಾಯಣ ಸೋಮಯಾಜಿ ಉಪಸ್ಥಿತರಿದ್ದರು.

ಸರಸ್ವತಿ ಪೂಜೆಯ ಧಾರ್ಮಿಕ ವಿಧಿವಿಧಾನಗಳನ್ನು ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಮತ್ತು ತಂಡದವರು ನಡೆಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು, ಎಲ್ಲಾ ವಿಭಾಗದ ಮುಖ್ಯಸ್ಥರು, ಶಿಕ್ಷಕರು, ಶಿಕ್ಷಕೇತರರು ವಿದ್ಯಾರ್ಥಿಗಳು ಭಾಗವಹಿಸಿದ್ದರು.





ಸರಸ್ವತಿ ಪೂಜೆಗೆ ವಿದ್ಯಾರ್ಥಿಗಳಿಂದ ಸಂಗ್ರಹವಾದ ಹಸಿರುವಾಣಿ

## ಶಿಶುಮಂದಿರ



ದಿನಾಂಕ 8–1–2026 ನೇ ಶ್ರೀರಾಮ ಶಿಶುಮಂದಿರಕ್ಕೆ ಬಾಲಗೋಕುಲ ಪ್ರಾಂತ ಪ್ರಮುಖರಾದ ಶ್ರೀ ಉಮೇಶ್ ಜಿ. ಆಗಮಿಸಿ ಮಕ್ಕಳಿಗೆ ವ್ಯಾಯಾಮ, ಕಥೆ, ಅಭಿನಯಗೀತೆಯನ್ನು ಹೇಳಿ ಕೊಟ್ಟರು. ಹಿರಿಯರಾದ ಶ್ರೀ ಪದ್ಮನಾಭ ಪಿ.ಕೆ ಉಪಸ್ಥಿತರಿದ್ದರು.



ವಿವೇಕ ಜಯಂತಿಯ ಪ್ರಯುಕ್ತ 12.1.2026ರಂದು ಮಕ್ಕಳು ವಿವೇಕಾನಂದರ ವೇಷ ಧರಿಸಿದ್ದರು. ಶ್ರೀರಾಮ ಶಿಶುಮಂದಿರ ಕಲ್ಲಡ್ಕ, ಶ್ರೀ ಗಣೇಶ ಶಿಶುಮಂದಿರ ಬೊಂಡಾಲ, ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಬಿ. ಸಿ. ರೋಡ್, ಶ್ರೀಕೃಷ್ಣ ಶಿಶುಮಂದಿರ ಸಜಿಪ ಕಂದೂರು ಇಲ್ಲಿನ 35 ಮಕ್ಕಳು, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಇಲ್ಲಿನ ಮಕ್ಕಳು ವೇಷಧಾರಿಗಳಾಗಿದ್ದರು.



ವಿದ್ಯಾಭಾರತಿ ಆಶಯದಂತೆ 30.1.26 ರಂದು ನಡೆದ ಸಪ್ತಶಕ್ತಿ ಸಂಗಮದಲ್ಲಿ ಡಾ. ಕಮಲಾ ಪ್ರಭಾಕರ್ ಭಟ್, ಶ್ರೀಮತಿ ಮಲ್ಲಿಕಾ ಶೆಟ್ಟಿರವರ ಉಪಸ್ಥಿತರಿದ್ದು, ಶ್ರೀಮತಿ ಶುಭಲಕ್ಷ್ಮಿ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಸೀತಾಲತಾ ಸಹಯೋಗಿ ಶಿಕ್ಷಕರು ನೆಟ್ಲ ಇವರನ್ನು ಸನ್ಮಾನಿಸಲಾಯಿತು.



ರಂಗ ಮಂಚ 5–1–2026: ಮಕ್ಕಳ ಪ್ರತಿಭಾ ಅನಾವರಣ ಮಾಡುವ ಪ್ರಯುಕ್ತ ಮಕ್ಕಳಿಗೆ ರಂಗಮಂಚ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದರಲ್ಲಿ ಎಲ್ಲಾ ತರಗತಿಯ ಮಕ್ಕಳಿಗೆ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಗೊಳಿಸಲು ಅವಕಾಶ ನೀಡಲಾಯಿತು. ಅದರಲ್ಲಿ ಮಕ್ಕಳು ವಿವಿಧ ಕಲೆಯನ್ನು ಪ್ರದರ್ಶಿಸಿದರು.



**4ನೇ ತರಗತಿ ಹೊರಸಂಚಾರ : 2.1.2026**

ಕಾರ್ಕಳ ಗೊಮ್ಮಟೇಶ್ವರ ಬೆಟ್ಟ, ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ ಹಾಗೂ ಮೂಡಬಿದ್ರೆ ಸಾವಿರ ಕಂಬದ ಬಸದಿ ಈ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು. ಒಟ್ಟು 35 ವಿದ್ಯಾರ್ಥಿಗಳು, ಇಬ್ಬರು ಅಧ್ಯಾಪಕರು ಭಾಗವಹಿಸಿದ್ದರು.



**ಪ್ರತಿಭಾ ಪುರಸ್ಕಾರ : 9.1.2026**

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷತೆಯಲ್ಲಿ ಬೌದ್ಧಿಕ ಸ್ಪರ್ಧೆ, ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.



**ಮಕರ ಸಂಕ್ರಮಣ : 15.1.2026**

ದ.ಕ ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಸಹಕಾರ್ಯದರ್ಶಿ ಶ್ರೀ ಲತೇಶ್ ಬಾಕ್ರಬೈಲ್ ಇವರು ಮಕರ ಸಂಕ್ರಮಣದ ಮಹತ್ವ ತಿಳಿಸಿದರು.



**ಭಜನಾ ವಾರ್ಷಿಕೋತ್ಸವದಲ್ಲಿ ಭಾಗಿ : 16.1.26**

ಶ್ರೀ ಶಾರದಾಂಬಾ ಭಜನಾ ಮಂದಿರ, ಕೇಶವ ನಗರ ಇಲ್ಲಿ ನಡೆದ ಭಜನಾ ವಾರ್ಷಿಕೋತ್ಸವದಲ್ಲಿ ಪ್ರಾಥಮಿಕ ವಿಭಾಗದ 45 ವಿದ್ಯಾರ್ಥಿಗಳು ಮತ್ತು 4 ಅಧ್ಯಾಪಕರು ಭಾಗವಹಿಸಿದರು.

## ಪ್ರಾಥಮಿಕ ಶಾಲೆ



ಶ್ರೀ ನಂದಕಿಶೋರ ಶಿಶುಮಂದಿರ ಪೆರಿಯಡ್ಕದಿಂದ ಶ್ರೀರಾಮ ಶಿಶುಮಂದಿರಕ್ಕೆ 20.1.2026 ರಂದು ಭೇಟಿ ನೀಡಿದ್ದರು. ಅವರೊಂದಿಗೆ ಡಾ. ಪ್ರಭಾಕರ ಭಟ್ ಮುಕ್ತವಾಗಿ ಸಮಾಲೋಚನೆ ನಡೆಸಿದರು. ಮಾತಾಜಿಯವರು, ಆಡಳಿತ ಮಂಡಳಿ ಸದಸ್ಯರು, ಮಕ್ಕಳು ಸೇರಿ ಒಟ್ಟು 31 ಮಂದಿ ಉಪಸ್ಥಿತರಿದ್ದರು.



**ವಿವೇಕಾನಂದ ಜಯಂತಿ : 12.1.2026**

ವಿವೇಕಾನಂದರ ಬಾಲ್ಯದ ಕಥೆಗಳನ್ನು ವಿಟ್ಲ ಸ. ಪ್ರಥಮದರ್ಜೆ ಕಾಲೇಜು ಉಪನ್ಯಾಸಕರಾದ ಶ್ರೀ ಓಂ ಪ್ರಕಾಶ್ ತಿಳಿಸಿದರು. ಅಕ್ಷರಾ ವೈಯಕ್ತಿಕ ಗೀತೆ ಹಾಡಿ, ದೇವಿಕೃಪಾ ವಿವೇಕಾನಂದರ ಬಗ್ಗೆ ಇಂಗ್ಲೀಷ್‌ನಲ್ಲಿ ಪ್ರಸ್ತುತ ಪಡಿಸಿದಳು, ಪ್ರಣಮ್ಯ ಅಮೃತ ವಚನವನ್ನು ನುಡಿದಳು. 1, 2ನೇ ತರಗತಿಯ 204 ವಿದ್ಯಾರ್ಥಿಗಳು ವಿವೇಕಾನಂದರ ವೇಷ ಧರಿಸಿದರು. ಶ್ರೀ ಸತೀಶ್ ಭಟ್ ಶಿವಗಿರಿ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ಟಿ.ಟಿ ಇಂಜೆಕ್ಷನ್ : 6.1.2026**

ಐದನೇ ತರಗತಿಯ ವಿದ್ಯಾರ್ಥಿಗಳಿಗೆ ಬಾಳ್ತಿಲ ಆರೋಗ್ಯ ಕೇಂದ್ರದ ವತಿಯಿಂದ ಟಿ.ಟಿ ಇಂಜೆಕ್ಷನ್ ನೀಡಲಾಯಿತು.



**ಚಿತ್ರಕಲಾ ಪ್ರದರ್ಶನದಲ್ಲಿ ಭಾಗಿ : 20.1.2026**

ವಿಟ್ಲ ಸರಕಾರಿ ಮಾದರಿ ಶಾಲೆಯಲ್ಲಿ ನಡೆದ ಚಿತ್ರಕಲಾ ಪ್ರದರ್ಶನ ವೀಕ್ಷಿಸಲು ಪ್ರಾಥಮಿಕ ವಿಭಾಗದ ಚಿತ್ರಕಲೆ ತರಬೇತಿ ಪಡೆಯುತ್ತಿರುವ 118 ವಿದ್ಯಾರ್ಥಿಗಳು ಹಾಗೂ 5 ಶಿಕ್ಷಕರು ಭಾಗಿಯಾಗಿರುತ್ತಾರೆ.



ರಥಸಪ್ತಮಿ 24.1.2026: ವಿಟ್ಲ ನಗರ ಪತಂಜಲಿ ಯೋಗ ಶಿಕ್ಷಣ ಸಮಿತಿ ಸಂಚಾಲಕರಾದ ಶ್ರೀ ಪ್ರಕಾಶ್ ಆನಡ್ಕ ಇವರು ರಥ ಸಪ್ತಮಿಯ ಮಹತ್ವ ತಿಳಿಸಿದರು. ಕೆಲಿಂಜ ಶ್ರೀನಿಕೇತನ ಶಾಖೆ ಸಂಚಾಲಕರು ಶ್ರೀ ರಾಮಣ್ಣ ಶುಭಹಾರೈಸಿದರು.



ಶಾಲಾ ಭೇಟಿ : 28.1.2026

ಸ.ಕಿ.ಪ್ರಾ.ಶಾಲೆ ಕುಜ್ಜುಬೆಟ್ಟು, ವಗ್ಗ ಇಲ್ಲಿಗೆ ಮುಂದಿನ ಶೈಕ್ಷಣಿಕ ವರ್ಷದ ದಾಖಲಾತಿಯ ದೃಷ್ಟಿಯಿಂದ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು, ಶ್ರೀ ಸುಮಂತ್ ಶ್ರೀಮಾನ್, ಶ್ರೀ ಸುಧೀಂದ್ರ ಶ್ರೀಮಾನ್ ಹಾಗೂ ವೇದಾವತಿ ಮಾತಾಜಿ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು. ಅಲ್ಲಿನ ಮುಖ್ಯೋಪಾಧ್ಯಾಯರಾದ ಶ್ರೀ ರಾಘವೇಂದ್ರ ಉಪಸ್ಥಿತರಿದ್ದರು.



ಅತಿಥಿಗಳ ಭೇಟಿ 09.01.2025

ಶ್ರೀ ಪರಿಮಳ್ ಷಾ (ಚಲನಚಿತ್ರ ನಿರ್ಮಾಪಕರು ಮುಂಬೈ), ಶ್ರೀ ವಿನಿತ್ ಷಾ (ಚಲನಚಿತ್ರ ಸಹನಿರ್ಮಾಪಕರು), ಶ್ರೀ ವಿಶಾಲ್ ಡುರಾಫೆ (ಉಪಾಧ್ಯಕ್ಷರು ಅಸ್ಸಾಂ ಕ್ರಿಕೆಟ್ ಅಸೋಸಿಯೇಷನ್), ಶ್ರೀ ಬಾಲಕೃಷ್ಣ ಭಂಡಾರಿ ಹಾಗೂ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ದೈನಂದಿನ ಸರಸ್ವತಿ ವಂದನೆಯಲ್ಲಿ ಭಾಗವಹಿಸಿದರು.



ಮತದಾರರ ಪ್ರತಿಜ್ಞಾವಿಧಿ–ಪರಾಕ್ರಮ ದಿವಸ 23.01.2026 ಸಹಶಿಕ್ಷಕ ಶ್ರೀ ಕೊಟ್ರೇಶ್ ಸುಭಾಷ್ ಚಂದ್ರ ಬೋಸರ ಜೀವನ ಚರಿತ್ರೆ ಹಾಗೂ ವಿದ್ಯಾರ್ಥಿಗಳಿಗೆ ಮತದಾರರ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ವೇದಿಕೆಯಲ್ಲಿ ಹಿರಿಯ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಉಪಸ್ಥಿತರಿದ್ದರು.



ಅತಿಥಿ ಭೇಟಿ : 27.1.2026

ಶೃಂಗೇರಿ ರೈತ ಒಕ್ಕೂಟದ ಅಧ್ಯಕ್ಷರಾದ ಶ್ರೀ ವಿಶ್ವನಾಥ್, ಭಾ.ಜ.ಪದ ಅಧ್ಯಕ್ಷರಾದ ಶ್ರೀ ಪ್ರದೀಪ್, ಸೌತಡ್ಕ ಮಹಾಗಣಪತಿ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಹರೀಶ್ ರಾವ್, ಧ.ಗ್ರಾ. ಯೋಜನೆಯ ಮಾಜಿ ಅಧ್ಯಕ್ಷರು ಶ್ರೀ ಜಯರಾಮ್ ನೆಲ್ಲಿತ್ತಾಯ, ಚಿಕ್ಕಮಗಳೂರು ಜಿ.ಪಂ. ಮಾಜಿ ಅಧ್ಯಕ್ಷರಾದ ಶ್ರೀ ರಾಮಸ್ವಾಮಿ, ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉಪಸ್ಥಿತರಿದ್ದರು.

ಶ್ರೀರಾಮ ಪ್ರೌಢಶಾಲೆ



ಅತಿಥಿಗಳ ಭೇಟಿ 05.01.2026

ವಿದ್ಯಾಭಾರತಿ ಕರ್ನಾಟಕದ ಪ್ರಾಂತ ಸಂಘಟನಾ ಕಾರ್ಯದರ್ಶಿ ಶ್ರೀ ಉಮೇಶ್ ಜಿ ಮಧುಕರ ಸಭಾಂಗಣದಲ್ಲಿ ದೈನಂದಿನ ಪ್ರಾರ್ಥನೆಯಾದ ಸರಸ್ವತಿ ವಂದನೆಯಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಹಾಗೂ ಪ್ರೌಢಶಾಲೆಯ ಮುಖ್ಯಗುರುಗಳಾದ ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು




ವಿವೇಕಾನಂದ ಜಯಂತಿ ಮತ್ತು ವಂದೇ ಮಾತರಂ 150 ವರ್ಷಾಚರಣೆ 12.01.2026 ಶ್ರೀ ಪ್ರಸಾದ್ ಕುಮಾರ್ (ನ್ಯಾಯವಾದಿಗಳು ವಿಶ್ವಹಿಂದೂ ಪರಿಷತ್ ಬಂಟ್ವಾಳ ಪ್ರಖಂಡದ ಅಧ್ಯಕ್ಷರು) ಶ್ರೀ ಭಾಸ್ಕರ ಅಮ್ಟೂರು (ನಿವೃತ್ತ ಯೋಧರು)ಹಾಗೂ ಶ್ರೀಮತಿ ಸುಧಾ ಭಟ್ ಪ್ರೌಢಶಾಲೆಯ ಮುಖ್ಯ ಗುರುಗಳಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು.



ಭಜನೆ–ಸಾಮೂಹಿಕ ಹುಟ್ಟುಹಬ್ಬ: 31.1.26

3ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನೆ ಶ್ರೀಮತಿ ಅನುರಾಧ ಕಾರ್ಯಕ್ರಮದ ಮಹತ್ವ ತಿಳಿಸಿದರು. ಪಂಜಾಬ್‌ನ ಪಠಾಣ್ ಕೋಟ್‌ನಲ್ಲಿ ಯೋಧರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ವಿನಯ್ ಕುಮಾರ್ ಮಕ್ಕಳಿಗೆ ಶುಭಹಾರೈಸಿದರು. ಅವರಿಗೆ ಆರತಿ ಬೆಳಗಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ಪ.ಪೂ ವಿಭಾಗದ ಉಪನ್ಯಾಸಕರು ಶ್ರೀ ರಮೇಶ್ ಹಾಡಿನ ಮೂಲಕ ಶುಭಹಾರೈಸಿದರು.



ಶತ ಜಯಘೋಷ್ ಪಥ ಸಂಚಲನದಲ್ಲಿ ಭಾಗಿ

13.01.2026 ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ.) ಆಶ್ರಯದಲ್ಲಿ ಪುತ್ತೂರಿನಲ್ಲಿ ನಡೆದ ಶತಜಯಘೋಷ್ ಪಥಸಂಚಲನದಲ್ಲಿ ಆನಕ, ಪನವ, ಶಂಖ, ಝಲ್ಲರಿ, ವಂಶಿ, ತ್ರಿಭುಜ, ಶೃಂಗ, ಘೋಷ್ ಪ್ರಮುಖರು ಸೇರಿ ಶ್ರೀರಾಮ ಪ್ರೌಢಶಾಲೆಯ 729 ವಿದ್ಯಾರ್ಥಿಗಳು, ವಿದ್ಯಾಕೇಂದ್ರದ ಒಟ್ಟು 929 ವಿದ್ಯಾರ್ಥಿಗಳು ಶತ ಜಯಘೋಷ್ ಪಥಸಂಚನದಲ್ಲಿ ಭಾಗವಹಿಸಿರುತ್ತಾರೆ



ಪ್ರಶಸ್ತಿ ಪ್ರದಾನ 09.01.2025: ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ ದ.ಕನ್ನಡ ನಡೆಸಿದ ಶಾಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ನಿಧಿ (ಪ್ರಥಮ) ನಿಧಿಶ್ರೀ (ದ್ವಿತೀಯ), ಪೂಜಿತ (ತೃತೀಯ) ಸ್ಥಾನ ಪಡೆದಿರುತ್ತಾರೆ, ಇವರಿಗೆ ಶ್ರೀ ನಾರಾಯಣ ರಾವ್ ಹಾಗೂ ಶ್ರೀಮತಿ ಮೂಕಾಂಬಿಕಾ (ಶ್ರೀ ಸತ್ಯಸಾಯಿ ಸೇ.ಸಂಸ್ಥೆ ದ.ಕ ಜಿಲ್ಲಾ ಶೈಕ್ಷಣಿಕ ಸಂಯೋಜಕರು) ಬಹುಮಾನ ನೀಡಿ ಗೌರವಿಸಿದರು



ಸ್ಪಂದನ ವಿದ್ಯಾಸಂಸ್ಥೆ ಭೇಟಿ : 17.1.2026

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಮುಂಡಲಗಿಯ ಸ್ಪಂದನ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ ಚಟುವಟಿಕೆಗಳನ್ನು ವೀಕ್ಷಿಸಿದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರೊಂದಿಗೆ ಸಮಲೋಚನೆ ನಡೆಸಿದರು.




**ಮಾಹಿತಿ ಕಾರ್ಯಗಾರ 8.1.2026** ಭಗೀರಥ ಮಾನವಿಕ ಸಂಘದಿಂದ ಪ್ರ. ಕಲಾ ವಿಭಾಗದ ವಿದ್ಯಾರ್ಥಿಗಳು ಬಾ.ಪ್ರಾ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪ್ರಥಮ ಚಿಕಿತ್ಸೆ ಮತ್ತು ಸರ್ಕಾರದ ಯೋಜನೆಯ ಬಗ್ಗೆ ಆ.ಕೇಂದ್ರದ ಸಹಾಯಕಿ ಜ್ಯೋತಿಯವರಿಂದ ಮಾಹಿತಿ ಪಡೆದರು.




**ವಿವೇಕ ಜಯಂತಿ 12.01.2026**

ನಾರಾಯಣಗುರು ಪದವಿ ಪೂರ್ವ ಕಾಲೇಜು, ಮಂಗಳೂರು ಕನ್ನಡ ಉಪನ್ಯಾಸಕರಾದ ಶ್ರೀ ಕೇಶವ ಬಂಗೇರ ವಿವೇಕಾನಂದರ ಬಗ್ಗೆ ಮಾನಾಡಿದರು. ವೇದಿಕೆಯಲ್ಲಿ ಪ್ರಾಚಾರ್ಯರು ಶ್ರೀ ವಸಂತ ಬಲ್ಲಾಳ್, ಶ್ರೀಮತಿ ರೇಖಾ ಶರ್ಮಾ ಮಾತೃ ಭಾರತಿ ಸದಸ್ಯರು ಉಪಸ್ಥಿತರಿದ್ದರು. ವಂದೇ ಮಾತರಂ ಗೀತೆಯ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿ



**ಎನ್‌ಸಿಸಿ ಫೈರಿಂಗ್ ಕ್ಯಾಂಪ್ 23.01.2026** ಎನ್.ಸಿ.ಸಿ ಕೆಡೆಟ್‌ನವರಿಗೆ 18 ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ ಪಾಂಡೇಶ್ವರದಲ್ಲಿ ಫೈರಿಂಗ್ ಕ್ಯಾಂಪ್ ಆಯೋಜಿಸಲಾಗಿದ್ದು, ಎಲ್ಲಾ 54 ಕೆಡೆಟ್ ನವರು ಭಾಗವಹಿಸಿದ್ದರು. ಮಾಜಿ ಸೈನಿಕರಾದ ಎನ್.ಬಿ ಪಾಟೀಲ್ ಶ್ರೀಮಾನ್ ಮತ್ತು ದೈಹಿಕ ನಿರ್ದೇಶಕರಾದ ಪ್ರಶಾಂತ್ ಶ್ರೀಮಾನ್ ಮಾರ್ಗದರ್ಶನ ನೀಡಿದರು.



**"ರಾಷ್ಟ್ರೀಯ ಮತದಾರರ ದಿನ" 23–01–2026**

ಪ್ರತಿಜ್ಞಾವಿಧಿಯನ್ನು ELCಯ ಅಧ್ಯಕ್ಷ ಜಯಸೂರ್ಯ ಟಟ ಬಿಸಿಎ ಇವರು ವಾಚಿಸಿದರು. ಉಪ ಪ್ರಾಂಶುಪಾಲರಾದ ಸುಕನ್ಯಾ ಮಾತಾಜಿ ಮತ್ತು ಯತಿರಾಜ್ ಶ್ರೀಮಾನ್ ELC ನಿರ್ದೇಶಕರಾದ ಆಶಾಲತಾ ಮಾತಾಜಿ ಹಾಗೂ ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು.



**ಪೋಷಕರ ಸಭೆ 01.01.2026**

ದ್ವಿ. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿಯಾದ ಶ್ರೀ ಸತೀಶ್ ಭಟ್ ಶಿವಗಿರಿ ವಹಿಸಿದ್ದರು. ಪ.ಪೂರ್ವ ವಿಭಾಗದ ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಾಣಿಜ್ಯ ವಿಭಾಗದ ಮುಖ್ಯಸ್ಥ ಶ್ರೀ ದಿನೇಶ್ ನಿರ್ವಹಿಸಿದರು.



**ಮಾಹಿತಿ ಕಾರ್ಯಗಾರ 8.01.2026** ಭಗೀರಥ ಮಾನವಿಕ ಸಂಘದಿಂದ ಪ್ರಥಮ ಕಲಾ ವಿಭಾಗದ ವಿದ್ಯಾರ್ಥಿಗಳು ಬಾಳ್ತಿಲ ಗ್ರಾಮದ ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಿದರು. ಗ್ರಾಮ ಪಂಚಾಯತ್‌ನ ಕಾರ್ಯಗಳ ಬಗ್ಗೆ ಶ್ರೀಮತಿ ಜ್ಯೋತಿ ಅವರು ವಿದ್ಯಾರ್ಥಿಗಳಿಗೆ ವಿವರಣೆ ನೀಡಿದರು. ರಾಜ್ಯಶಾಸ್ತ್ರ ಉಪನ್ಯಾಸಕರು ಮತ್ತು ಪ್ರಾಂಶುಪಾಲರು ಉಪಸ್ಥಿತರಿದ್ದರು.



**ಶತ ಜಯಘೋಷ್ ಪಥಸಂಚಲನ 13.01.26** ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ.) ಆಶ್ರಯದಲ್ಲಿ ಪುತ್ತೂರಿನಲ್ಲಿ ನಡೆದ ಶತ ಜಯಘೋಷ್ ಪಥ ಸಂಚಲನದಲ್ಲಿ ಶ್ರೀ ರಾಮ ಪದವಿ ಪೂರ್ವ ವಿದ್ಯಾಲಯದ ಒಟ್ಟು 166 ವಿದ್ಯಾರ್ಥಿಗಳು ಭಾಗವಹಿಸಿದರು.




**ದಿನಾಂಕ 29/1/2026 ರಿಂದ 4/2/2026** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಬೈಠಕ್ ನಗ್ರಿಯಲ್ಲಿ ನಡೆಯಿತು. ಉಪಪ್ರಾಂಶುಪಾಲರು ಶ್ರೀ ಯತಿರಾಜ್ ಶಿಬಿರದ ಕುರಿತು ಪ್ರಸ್ತಾವಿಕ ಮಾತುಗಳನ್ನಾಡಿದರು. ಸಂಯೋಜಕರಾದ ವಿನುತ ಮಾತಾಜಿ ಉಪಸ್ಥಿತರಿದ್ದರು.



**ಪ್ರವಾಸ 03.01.2026** :ಪ್ರ.ಪಿಯುಸಿ ವಿಭಾಗದ ವಿದ್ಯಾರ್ಥಿಗಳು ಸಾವಿರಕಂಬ ಬಸದಿ, ಚತುರ್ಮುಖ ಬಸದಿ, ಕಾರ್ಕಳ ಗೊಮ್ಮಟೇಶ್ವರ ಬೆಟ್ಟ, ಮಣಿಪಾಲ ಜೈವಿಕ ವಸ್ತುಸಂಗ್ರಹಾಲಯ, ಉಡುಪಿ ಶ್ರೀಕೃಷ್ಣ ದೇವಸ್ಥಾನ, ಕಾಪು ಮಾರಿಯಮ್ಮ ದೇವಸ್ಥಾನ, ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನಗಳನ್ನು ವೀಕ್ಷಣೆ ಮಾಡಲಾಯಿತು. ಶ್ರೀ ರಮೇಶ್ ಶ್ರೀಮಾನ್, ಶ್ವೇತಾ ಮಾತಾಜಿ ಹಾಗೂ 45 ವಿದ್ಯಾರ್ಥಿಗಳು ಭಾಗವಹಿಸಿದರು.



**ಎನ್.ಸಿ.ಸಿ ಟ್ರೆಕ್ಕಿಂಗ್ 09.01.2026** ಎನ್.ಸಿ.ಸಿ ಕ್ಯಾಡೆಟ್‌ನವರಿಗೆ , ಪೊಳಲಿ ರಾಜರಾಜೇಶ್ವರಿ ದೇವಸ್ಥಾನ, ಕೊಡಾಜೆ ಕಲ್ಲು, ಸಾವಿರಕಂಬ ಬಸದಿ, ಪಣಂಬೂರು ಬೀಚ್ ಗಳಿಗೆ ಒಂದು ದಿನದ ಟ್ರೆಕ್ಕಿಂಗ್ ಆಯೋಜಿಸಲಾಗಿತ್ತು. ಎನ್.ಸಿ.ಸಿ ತರಬೇತುದಾರ , ಮಾಜಿ ಸೈನಿಕ ಎನ್. ಬಿ ಪಾಟೀಲ್ ಶ್ರೀಮಾನ್ ಮಾರ್ಗದರ್ಶನ ಮಾಡಿದರು, ಶ್ರೀ ದಿನೇಶ್ ಶ್ರೀಮಾನ್ ಮತ್ತು ಕುಮಾರಿ ಕೃಷ್ಣಕೃಪಾ ಮಾತಾಜಿ ಭಾಗವಹಿಸಿದ್ದರು.



**ಪ್ರೌಢಶಾಲೆ ಭೇಟಿ 16.01.2026**

ಮುಂದಿನ ವರ್ಷದ ದಾಖಲಾತಿಗೆ ಸಂಬಂಧಿಸಿದಂತೆ ತಾಲೂಕಿನ ಎಲ್ಲಾ ಪ್ರೌಢಶಾಲೆಗಳಿಗೆ ಬೇಟಿ ತಮ್ಮ ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಯ ಬಗ್ಗೆ ತಿಳಿಸಿ ಸಂಸ್ಥೆಗೆ ದಾಖಲಾತಿಗೊಳ್ಳುವಂತೆ ತಿಳಿಸಲಾಯಿತು.




ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ, ಕಲ್ಲಡ್ಕದ ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನ ಕುಮಾರಿ ಹಾಗೂ ಹಿಂದಿ ಭಾಷಾ ಉಪನ್ಯಾಸಕ ಶ್ರೀ ದೀಕ್ಷಿತ್ ಇವರು 2025ನೇ ವರ್ಷದ ಕೆಸೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಸಹ ಪ್ರಾಧ್ಯಾಪಕ ಹುದ್ದೆಗೆ ಅರ್ಹತೆ ಪಡೆದಿರುತ್ತಾರೆ.